## ಇಂದು ನಾಮಪತ್ರ ಪರಿಶೀಲನೆ । ಅರ್ಜಿ ಹಿಂಪಡೆಯಲು ಜೂನ್ 12 ಕಡೆಯ ದಿನ

# ದೇವೇಗೌಡ, ಕಡಾಡಿ, ಗಸ್ತಿ ನಾಮಪತ್ರ

10/6/2020

■ **ವಿಕ ಸುದ್ದಿಲೋಕ** ಬೆಂಗಳೂರು

ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ಬಿಜೆಪಿಯ ಈರಣ್ಣ ಕಡಾಡಿ ಹಾಗೂ ಅಶೋಕ್ ಗಸ್ತಿ ರಾಜ್ಯಸಭೆ ಚುನಾವಣೆ ಅಭ್ಯರ್ಥಿಗಳಾಗಿ ಮಂಗಳವಾರ ನಾಮಪತ್ರ ಸಲ್ಲಿಸಿದರು. ಜತೆಗೆ ಸಂಗಮೇಶ ನರಗುಂದ ಎಂಬುವವರು ಪಕ್ಷೇತರರಾಗಿ ಉಮೇದುವಾರಿಕೆ ಸಲ್ಲಿಸಿದ್ದಾರೆ.

ರಾಜ್ಯಸಭೆಯ 4 ಸ್ಥಾನಗಳಿಗೆ ನಡೆಯುವ ಚುನಾವಣೆಗೆ ಕಾಂಗ್ರೆಸ್‌ನಿಂದ ಮಲ್ಲಿಕಾರ್ಜುನ ಖರ್ಗೆ ಸೋಮವಾರವೇ ನಾಮಪತ್ರ ಸಲ್ಲಿಸಿದ್ದರು. ಮಾಜಿ ಪ್ರಧಾನಿ ದೇವೇಗೌಡ ಅವರೂ ಕಾಂಗ್ರೆಸ್ ಬೆಂಬಲದಿಂದ ಕಣಕ್ಕೆ ಇಳಿದಿದ್ದಾರೆ. ಆದರೆ, ಗೌಡರು ನಾಮಪತ್ರ ಸಲ್ಲಿಸುವಾಗ ರಾಜ್ಯ ಕಾಂಗ್ರೆಸ್‌ನ ಯಾವ ಮುಖಂಡರೂ ಜತೆಗಿರಲಿಲ್ಲ, ದೇವೇಗೌಡ ಅವರೊಂದಿಗೆ ಪುತ್ರರಾದ ಎಚ್.ಡಿ.ಕುಮಾರಸ್ವಾಮಿ, ಎಚ್.ಡಿ.ರೇವಣ್ಣ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ ಮತ್ತಿತರರು ಇದ್ದರು.

ಪಕ್ಷೇತರ ಅಭ್ಯರ್ಥಿ ಸಂಗಮೇಶ ನರಗುಂದ ನಾಮಪತ್ರಕ್ಕೆ ಸೂಚಕರು ಇಲ್ಲದೆ ಇರುವುದರಿಂದ ಅವರ ಸ್ಪರ್ಧೆಯನ್ನು ಗಂಭೀರವಾಗಿ ತೆಗೆದುಕೊಳ್ಳುವಂತಿಲ್ಲ, ಈ ನಡುವೆಯೂ ಚುನಾವಣಾಧಿಕಾರಿ ಆಗಿರುವ ವಿಧಾನಸಭೆ ಕಾರ್ಯದರ್ಶಿ ಅವರು 5 ಅಭ್ಯರ್ಥಿಗಳಿಂದ ನಾಮಪತ್ರ ಬಂದಿರುವುದಾಗಿ ತಿಳಿಸಿದ್ದಾರೆ. ನಾಮಪತ್ರ ಪರಿಶೀಲನೆ ಕಾರ್ಯ ಬುಧವಾರ ನಡೆಯಲಿದೆ. ಈ ಹಂತದಲ್ಲಿ ಪಕ್ಷೇತರ ಉಮೇದುವಾರರ ನಾಮಪತ್ರ ತಿರಸ್ಕೃತವಾಗುವುದು ಖಚಿತವಾಗಲಿದೆ. ಹಾಗಾಗಿ ಖರ್ಗೆ, ದೇವೇಗೌಡ, ಕಡಾಡಿ, ಅಶೋಕ್ ಗಸ್ತಿ ಮಾತ್ರ ಅಂತಿಮವಾಗಿ ಕಣದಲ್ಲಿ ಉಳಿಯಲಿದ್ದಾರೆ. ಈ ನಾಲ್ವರಷ್ಟೇ ಕಣದಲ್ಲಿ ಉಳಿದುಕೊಂಡಾಗ ಮತದಾನ ನಡೆಸುವ ಪ್ರಶ್ನೆ ಉದ್ಭವಿಸುವುದಿಲ್ಲ, ಈ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆ ನಡೆಯುವುದು ಬಹುತೇಕ ಖಚಿತವಾಗಿದೆ. ನಾಮಪತ್ರ ಹಿಂಪಡೆಯಲು ಜೂನ್ 12 ಅಂತಿಮ ದಿನವಾಗಿದೆ.



ರಾಜ್ಯಸಭೆಗೆ ಜೆಡಿಎಸ್ ಅಭ್ಯರ್ಥಿಯಾಗಿ ಎಚ್.ಡಿ. ದೇವೇಗೌಡರು ಮಂಗಳವಾರ ನಾಮಪತ್ರ ಸಲ್ಲಿಸಿದರು. ಪಕ್ಷದ ರಾಜ್ಯ ಮುಖಂಡರು ಮತ್ತು ಇಬ್ಬರು ಪುತ್ರರು ಹಾಜರಿದ್ದರು.



ನಾಮಪತ್ರ ಸಲ್ಲಿಸುವಾಗ ಬಿಜೆಪಿ ಅಭ್ಯರ್ಥಿಗಳಾದ ಈರಣ್ಣ ಕಡಾಡಿ, ಅಶೋಕ್ ಗಸ್ತಿ ಅವರಿಗೆ ಸಿಎಂ ಹಾಗೂ ರಾಜ್ಯಾಧ್ಯಕ್ಷರು ಸಾಥ್ ನೀಡಿದರು.

## ನನ್ನೊಂದಿಗೆ ಚರ್ಚಿಸಿಯೇ ಹೈಕಮಾಂಡ್ ತೀರ್ಮಾನಿಸಿದೆ: ಸಿಎಂ

''ಈ ಬಾರಿ ಸಾಮಾನ್ಯ ಕಾರ್ಯಕರ್ತರಿಗೆ ರಾಜ್ಯಸಭೆ ಟಿಕೆಟ್ ನೀಡಲಾಗಿದೆ. ನಮ್ಮ ಕೋರ್ ಕಮಿಟಿಯಿಂದ ಕೆಲವರ ಹೆಸರು ಕಳುಹಿಸಿದ್ದೆವು. ಆದರೆ, ಅಂತಿಮವಾಗಿ ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ನನಗೆ ಕರೆ ಮಾಡಿ ಈ ಬಾರಿ ಸಾಮಾನ್ಯ ಕಾರ್ಯಕರ್ತರಿಗೆ ಅವಕಾಶ ನೀಡಲಾಗುವುದೆಂದರು. ಅದರ ಪ್ರಕಾರ ಚರ್ಚಿಸಿ ಈರಣ್ಣ ಕಡಾಡಿ, ಅಶೋಕ್ ಗಸ್ತಿ ಹೆಸರನ್ನು ವರಿಷ್ಠರು ಪ್ರಕಟಿಸಿದ್ದಾರೆ. ಈ ಇಬ್ಬರೂ ರಾಜ್ಯಸಭೆ ಸದಸ್ಯರಾಗಿ ಒಳ್ಳೆಯ ಕೆಲಸ ಮಾಡುವ ವಿಶ್ವಾಸವಿದೆ. ಇವರಿಗೆ ಶುಭ ಹಾರೈಸುತ್ತೇನೆ,'' ಎಂದು ಸಿಎಂ ಬಿ.ಎಸ್.ಯಡಿಯೂರಪ್ಪ ಹೇಳಿದರು.

ವಿಧಾನಸೌಧದಲ್ಲಿ ಪ್ರತಿಕ್ರಿಯಿಸಿದ ಅವರು, ''ನಮ್ಮ ಕೇಂದ್ರದ ನಾಯಕರು ಸಾಮಾನ್ಯ ಕಾರ್ಯಕರ್ತರನ್ನು ಗುರುತಿಸಿದ್ದಾರೆ. ಈ ಮೂಲಕ ಕಾರ್ಯಕರ್ತರಿಗೆ ದೊಡ್ಡ ಕೊಡುಗೆ ನೀಡಿದಂತಾಗಿದೆ. ಅದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ, ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಅಭಿನಂದಿಸುತ್ತೇನೆ. ಬಹುಶಃ ಬಿಜೆಪಿಯಲ್ಲಿ ಮಾತ್ರ ಇಂತಹ ತೀರ್ಮಾನ ತೆಗೆದುಕೊಳ್ಳಲು ಸಾಧ್ಯ,'' ಎಂದರು.

ಇದಾದ ಬಳಿಕ ಅವಿರೋಧ ಆಯ್ಕೆಯ ಬಗ್ಗೆ ಪ್ರಕಟವಾಗಲಿದೆ.

**ಬಿಜೆಪಿ ಅಭ್ಯರ್ಥಿಗಳಿಗೆ ಸಿಎಂ ಸಾಥ್:** ಬಿಜೆಪಿ ಅಭ್ಯರ್ಥಿಗಳಾದ ಈರಣ್ಣ ಕಡಾಡಿ, ಅಶೋಕ್ ಗಸ್ತಿ ನಾಮಪತ್ರ ಸಲ್ಲಿಸುವಾಗ ಸಿಎಂ ಬಿ.ಎಸ್.ಯಡಿಯೂರಪ್ಪ ಸಾಥ್ ನೀಡಿದರು. ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಡಿಸಿಎಂ ಲಕ್ಷ್ಮಣ ಸವದಿ, ಸಚಿವರಾದ ರಮೇಶ್ ಜಾರಕಿಹೊಳಿ, ಸಿ.ಟಿ.ರವಿ ಜತೆಗಿದ್ದರು.

ನಾಮಪತ್ರ ಸಲ್ಲಿಕೆಗೂ ಮುನ್ನ ಉಭಯ ಅಭ್ಯರ್ಥಿಗಳೂ ರಾಜ್ಯ ಬಿಜೆಪಿ ಕಚೇರಿಗೆ ಭೇಟಿ ನೀಡಿದರು. ಪಕ್ಷದ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಕಡೆಯಿಂದ ಬಿ ಫಾರಂ ಪಡೆದುಕೊಂಡರು. ನಂತರ ವಿಧಾನಸೌಧದಲ್ಲಿ ಜಲಸಂಪನ್ಮೂಲ ಸಚಿವ ರಮೇಶ್ ಜಾರಕಿಹೊಳಿ ಅವರ ಕಚೇರಿಯಲ್ಲಿ ಕಟೀಲ್ ಸೇರಿದಂತೆ ಬಿಜೆಪಿ ಮುಖಂಡರು ಹಾಗೂ ಶಾಸಕರು ಸಭೆ ನಡೆಸಿದರು. ಅಲ್ಲಿಂದ ನೇರವಾಗಿ ವಿಧಾನಸಭೆ ಕಾರ್ಯದರ್ಶಿ ಅವರ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಿದರು. ಈ ಹಂತದಲ್ಲಿ ಸಿಎಂ ಬಿಎಸ್‌ವೈ ಜತೆಯಾದರು.

**ಬೆಳಗಾವಿಗರ ಫೋಟೊ ಶೋ!:** ಈ ಮಧ್ಯೆ ಸಚಿವ ಜಾರಕಿಹೊಳಿ ಕಚೇರಿಯಲ್ಲಿ ಸೇರಿದ್ದ ಬೆಳಗಾವಿಯ ಮುಖಂಡರಾದ ಉಮೇಶ್ ಕತ್ತಿ, ಲಕ್ಷ್ಮಣ ಸವದಿ, ರಮೇಶ್ ಕತ್ತಿ, ಮಹಾಂತೇಶ ಕವಟಗಿಮಠ, ಶಶಿಕಲಾ ಜೊಲ್ಲೆ, ಅಣ್ಣಾಸಾಹೇಬ್ ಜೊಲ್ಲೆ, ರಮೇಶ್ ಕತ್ತಿ ಅವರು ಫೋಟೊಗೆ ಪೋಸ್ ನೀಡಿದರು.

### ಐವರಿಂದ ನಾಮಪತ್ರ ಸಲ್ಲಿಕೆ

**ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ (4 ಸೆಟ್), ಜೆಡಿಎಸ್‌ನ ಎಚ್.ಡಿ.ದೇವೇಗೌಡ (4 ಸೆಟ್), ಬಿಜೆಪಿಯ ಈರಣ್ಣ ಕಡಾಡಿ (2 ಸೆಟ್), ಅಶೋಕ್ ಗಸ್ತಿ (2 ಸೆಟ್) ಹಾಗೂ ಪಕ್ಷೇತರ ಸಂಗಮೇಶ ನರಗುಂದ (2 ಸೆಟ್) ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದಾರೆ ಎಂದು ಚುನಾವಣಾಧಿಕಾರಿ ಎಂ.ಕೆ.ವಿಶಾಲಾಕ್ಷಿ ತಿಳಿಸಿದ್ದಾರೆ.**

ಈ ಇಬ್ಬರು ಅಭ್ಯರ್ಥಿಗಳ ಆಯ್ಕೆ ರಾಜ್ಯ ರಾಜಕಾರಣದಲ್ಲಿ ಸಂಚಲನ ಮೂಡಿಸಿದೆ. ಕಾರ್ಯಕರ್ತರಲ್ಲಿ ವಿಶ್ವಾಸ ತುಂಬುವ ಕೆಲಸವನ್ನು ಪಕ್ಷ ಮಾಡಿದೆ. ಅಭ್ಯರ್ಥಿಯಾಗಲು ಇವರು ಅರ್ಜಿ ಹಾಕಿರಲಿಲ್ಲ, ಆದರೂ ವರಿಷ್ಠರು ತೀರ್ಮಾನ ಪ್ರಕಟಿಸಿದ್ದಾರೆ. **-ನಳಿನ್ ಕುಮಾರ್ ಕಟೀಲ್**

ಪಕ್ಷದಲ್ಲಿ ಒಂದು ಸ್ಥಾನಮಾನ ಸಿಗುವ ವಿಶ್ವಾಸವಿದ್ದೇ ಇತ್ತು. ವರಿಷ್ಠರು ಈ ಅವಕಾಶ ನೀಡಿದ್ದರಿಂದ ಖುಷಿಯಾಗಿದೆ. ಆಕಾಂಕ್ಷಿಗಳೆಲ್ಲರೂ ನಮ್ಮ ಮುಖಂಡರು. ಅವರನ್ನು ಹಿಂದಿಕ್ಕಿ ನಾವು ಮುಂದೆ ಹೋಗುತ್ತಿದ್ದೇವೆಂದು ವ್ಯಾಖ್ಯಾನಿಸಬಾರದು.

**-ಈರಣ್ಣ ಕಡಾಡಿ** ಬಿಜೆಪಿ ಅಭ್ಯರ್ಥಿ

ಕಾರ್ಯಕರ್ತರನ್ನು ಗುರುತಿಸಿರುವುದು ವರಿಷ್ಠರ ತೀರ್ಮಾನ. ಘಟಾನುಘಟಿ ನಾಯಕರನ್ನು ನಾವು ಹಿಂದಿಕ್ಕಿದ್ದೇವೆಂದು ಹೇಳುವುದು ಸರಿಯಲ್ಲ, ಆಕಾಂಕ್ಷಿಗಳೆಲ್ಲ ಹಿರಿಯರು. ಅವರೊಂದಿಗೆ ನಾನೇ ಮಾತನಾಡುತ್ತೇನೆ. ರಾಜ್ಯಸಭೆಯಲ್ಲಿ ರಾಜ್ಯದ ಘನತೆ ಎತ್ತಿ ಹಿಡಿಯುವ ಕೆಲಸ ಮಾಡುತ್ತೇನೆ.

**-ಅಶೋಕ್ ಗಸ್ತಿ** ಬಿಜೆಪಿ ಅಭ್ಯರ್ಥಿ